# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 692
ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 22.02.2023
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಕಂದಾಯ ಇಲಾಖೆಯ ಸ್ಥಾನಿಕ ಸಮಸ್ಯೆಗಳ ಬಗ್ಗೆ ಸಂಬಂಧಪಟ್ಟವರು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ ಮನವಿಗಳನ್ನು ಪರಿಶೀಲಿಸಲಾಗುತ್ತಿದೆಯೇ; ಸದರಿ ಮನವಿಗಳಲ್ಲಿರುವ ಅಂಶಗಳನ್ನು ಕ್ರೋಢೀಕರಿಸಿ ಜಿಲ್ಲಾಧಿಕಾರಿಗಳು ಅಗತ್ಯ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸಿದ್ದಾರೆಯೇ; ಸರ್ಕಾರ ಈ ಕುರಿತು ಸ್ಪಂದಿಸಿದೆಯೇ; (ಇತ್ತೀಚಿನ ಮೂರು ವರ್ಷಗಳ ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ಕಂದಾಯ ಇಲಾಖೆಯಲ್ಲಿ ಸ್ವೀಕರಿಸಲಾಗುತ್ತಿರುವ ಸ್ಥಾನಿಕ ಸಮಸ್ಯೆಗಳ ಅಹವಾಲುಗಳನ್ನು ಪರಿಶೀಲಿಸಲಾಗುತ್ತಿದ್ದು, ಈ ಬಗ್ಗೆ ಪ್ರತಿ ತಿಂಗಳಿನಲ್ಲಿ ಒಂದು ದಿನ ಗ್ರಾಮ ವಾಸ್ತವ್ಯ ಹಾಗೂ ಸಾರ್ವಜನಿಕ ಸಮಸ್ಯೆಗಳನ್ನು ಬಗೆಹರಿಸಲು ತಾಲ್ಲೂಕು ಕಛೇರಿಗಳಲ್ಲಿ ಸಾರ್ವಜನಿಕ ಕುಂದು ಕೊರತೆ ಸಭೆಗಳನ್ನು ಹಾಗೂ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿ ಸಂಬಂಧಪಟ್ಟ ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ ಹಾಗೂ ತಹಶೀಲ್ದಾರರ ಹಂತದಲ್ಲಿ ಇತ್ಯರ್ಥಪಡಿಸಲಾಗುತ್ತಿದೆ. ಮುಂದುವರೆದು ಸರ್ಕಾರದ ಹಂತದಲ್ಲಿ ಇತ್ಯರ್ಥಪಡಿಸಬೇಕಾದ ಅಹವಾಲುಗಳಿದ್ದಲ್ಲಿ ಅವುಗಳನ್ನು ನಿಯಮಾನುಸಾರ ಪರಿಶೀಲಿಸಿ ಇತ್ಯರ್ಥಗೊಳಿಸಲು ಕ್ರಮವಹಿಸಲಾಗುತ್ತಿದೆ. |
| (ಆ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ಕೆಲವು ಸ್ಥಾನಿಕ ಸಮಸ್ಯೆಗಳು ಕಂದಾಯ ಅದಾಲತ್, ಗ್ರಾಮ ವಾಸ್ತವ್ಯ, ಜನಸ್ಪಂದನ ಕಾರ್ಯಕ್ರಮಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅವುಗಳನ್ನು ಪಟ್ಟಿ ಮಾಡಿ ಪರಿಹರಿಸಲು ಕ್ರಮವಹಿಸಿದೆಯೇ (ವಿವರ ನೀಡುವುದು); | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂದಾಯ ಅದಾಲತ್ , ಗ್ರಾಮ ವಾಸ್ತವ್ಯ, ಜನಸ್ಪಂದನ ಕಾರ್ಯಕ್ರಮಗಳು ನಡೆಯುತ್ತಿದ್ದು, ಸ್ವೀಕೃತವಾದ ಎಲ್ಲಾ ಅರ್ಜಿಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗ್ರಾಮ ವಾಸ್ತವ್ಯದ ಕಾರ್ಯಕ್ರಮದಲ್ಲಿ ಒಟ್ಟು 6747 ಅರ್ಜಿಗಳು ಸ್ವೀಕೃತವಾಗಿದ್ದು, 6259 ಅರ್ಜಿಗಳನ್ನು ಇತ್ಯರ್ಥಪಡಿಸಿದ್ದು, ಉಳಿಕೆ 488 ಅರ್ಜಿಗಳು ತನಿಖಾ ಹಂತದಲ್ಲಿರುತ್ತವೆ.<br><br>ಉಡುಪಿ ಜಿಲ್ಲೆಯಲ್ಲಿ ಕಂದಾಯ ಅದಾಲತ್, ಗ್ರಾಮ ವಾಸ್ತವ್ಯ, ಜನಸ್ಪಂದನ ಕಾರ್ಯಕ್ರಮಗಳು ನಡೆಯುತ್ತಿದ್ದು, ಸ್ವೀಕೃತವಾದ ಎಲ್ಲಾ ಅರ್ಜಿಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲಾಗುತ್ತಿದೆ. ಉಡುಪಿ ಜಿಲ್ಲೆಯಲ್ಲಿ |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಗ್ರಾಮ ವಾಸ್ತವ್ಯದ ಕಾರ್ಯಕ್ರಮದಲ್ಲಿ ಒಟ್ಟು 3700 ಅರ್ಜಿಗಳು ಸ್ವೀಕೃತವಾಗಿದ್ದು, 3655 ಅರ್ಜಿಗಳನ್ನು ಇತ್ಯರ್ಥಪಡಿಸಿದ್ದು, ಉಳಿಕೆ 45 ಅರ್ಜಿಗಳು ತನಿಖಾ ಹಂತದಲ್ಲಿರುತ್ತವೆ. |
| (ಇ) | ದಕ್ಷಿಣ ಕನ್ನಡ / ಉಡುಪಿ ಜಿಲ್ಲೆಗಳಲ್ಲಿ ಭೂ ಪರಿವರ್ತನೆ ಮಾಡುವಾಗ ಖಾಸಗಿ ಸಂಪರ್ಕ ರಸ್ತೆ, ರಸ್ತೆ ಅಂಚು, ಸೀಆರ್‌ಝಡ್ ಮತ್ತು ವಿವಿಧ ವಲಯಗಳು, ಆರ್‌ಆರ್‌ಟಿಸಿಆರ್ ಹೊಂದಾಣಿಕೆ ಬರದೆ ಇರುವ ಪ್ರಕರಣಗಳು ಮೂಲ ಕಡತ ಇಲ್ಲ ಎಂದು ಭೂ ಪರಿವರ್ತನೆ ತಿರಸ್ಕರಿಸುವುದು, ಭೂ ಪರಿವರ್ತನೆಯನ್ನು ಪಹಣಿಯಲ್ಲಿ ದಾಖಲಿಸದಿರುವುದು ೧-೫ ದರ್ಖಾಸು, ಪ್ಲಾಟಿಂಗ್ ಆಗದಿರುವುದು, ಜಾಗ ವಿಭಜನೆಯ ಪೋಡಿ ಆಗದಿರುವುದು, ಭೂ ಪರಿವರ್ತನೆಯಲ್ಲಿ ಅಗತ್ಯ ವಿಧಗಳು ಇಲ್ಲದಿರುವುದು, ಮೂಲಗೇಣಿ ಸಮಸ್ಯೆ ಇತ್ಯಾದಿ ದೀರ್ಘಾವಧಿ ಸಮಸ್ಯೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸಮಸ್ಯೆಗಳನ್ನು ಪರಿಹರಿಸಲು ಕಾಲಮಿತಿಯೊಳಗೆ /ಪ್ರಕ್ರಿಯೆಗಳನ್ನು ಸರಳೀಕರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 156 ಎಲ್‌ಜಿಪಿ 2020(ಇ) ದಿನಾಂಕ: 21.09.2020 ರಲ್ಲಿನ ಮಾನದಂಡಗಳ ಅನುಸಾರ ಭೂ ಪರಿವರ್ತನೆಗೆ ಕ್ರಮವಹಿಸಲಾಗುತ್ತಿರುತ್ತದೆ.<br><br>ಉಡುಪಿ ಜಿಲ್ಲಾ ವ್ಯಾಪ್ತಿಯಲಲಿ ಭೂ ಪರಿವರ್ತನೆ ಮಾಡುವಾಗ ಖಾಸಗಿ ಸಂಪರ್ಕ ರಸ್ತೆ ಇದ್ದ ಸಂದರ್ಭದಲ್ಲಿ ಖಾಸಗಿ ಜಮೀನಿನ ಮಾಲೀಕರ ಒಪ್ಪಿಗೆ ಪಡೆದು ಭೂ ಪರಿವರ್ತನೆಗೊಳಿಸಲಾಗುತ್ತಿದೆ. ಸಿ.ಆರ್.ಝಡ್. ವ್ಯಾಪ್ತಿಯಲ್ಲಿ ಬಂದ ಸಂದರ್ಭದಲ್ಲಿ ಸಿ.ಆರ್. ಝಡ್. ಇಲಾಖೆಯಿಂದ ನಿರಾಕ್ಷೇಪಣಾ ಪ್ರಮಾಣ ಪತ್ರ ಪಡೆದು ಭೂ ಪರಿವರ್ತನೆಯ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ. ವಿವಿಧ ವಲಯಗಳಲ್ಲಿ ಬಂದ ಸಂದರ್ಭದಲ್ಲಿ ಸಂಬಂಧಪಟ್ಟ ನಗರಾಭಿವೃದ್ಧಿ ಪ್ರಾಧಿಕಾರಗಳಿಂದ ನಿರಾಕ್ಷೇಪಣಾ ಪ್ರಮಾಣಪತ್ರ ಪಡೆದು ಭೂ ಪರಿವರ್ತನೆ ಬಗ್ಗೆ ಕ್ರಮಕೈಗೊಳ್ಳಲಾಗುತ್ತಿದೆ. |
| (ಈ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಇರುವ ಗೋಮಾಳ ಭೂಮಿಯೆಷ್ಟು; ಅದರಲ್ಲಿ ಅತಿಕ್ರಮಣವಾಗಿದ್ದೆಷ್ಟು; ಇತರ ಉದ್ದೇಶಕ್ಕೆ ಬಳಸಿದ್ದೆಷ್ಟು ಮತ್ತು ಅದಕ್ಕೆ ಅವಕಾಶವಿದೆಯೇ; ಪ್ರಸ್ತುತ ಎಷ್ಟು ಜಾಗ ಉಳಿದಿದೆ? (ಸುತ್ತೋಲೆಗಳು ಮತ್ತು ಅಂಕಿ-ಅಂಶ ಸಹಿತ ವಿವರ ನೀಡುವುದು) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಒಟ್ಟು ಗೋಮಾಳ ಜಮೀನಿನ ವಿಸ್ತೀರ್ಣ 5628.3961 ಎಕರೆ ಆಗಿರುತ್ತದೆ. ಗೋಮಾಳ ಜಮೀನಿನ ಒತ್ತುವರಿ ವಿಸ್ತೀರ್ಣ 1264.4486 ಎಕರೆ ಹಾಗೂ ಉಳಿಕೆ 4363.9475 ಆಗಿರುತ್ತದೆ. ಗೋಮಾಳ ಜಮೀನನ್ನು ಇತರೆ ಉದ್ದೇಶಗಳಿಗೆ ಬಳಸುವ ಕುರಿತು ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 02 ಎಲ್‌ಜಿಪಿ 2021, ದಿನಾಂಕ: 24.02.2022ರಂತೆ ಹಾಗೂ ಕರ್ನಾಟಕ ಭೂ ಮಂಜೂರಾತಿ ನಿಯಮಗಳು, 1966ರ ನಿಯಮ 97(4)ರಡಿರನ್ವಯ ಕ್ರಮವಹಿಸಲಾಗುತ್ತಿದೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಉಡುಪಿ ಜಿಲ್ಲೆಯಲ್ಲಿ ಒಟ್ಟು 3844.48.50 ಎಕರೆ ಗೋಮಾಳ ಜಮೀನಿರುತ್ತದೆ. ಈ ಪೈಕಿ 945.38.80 ಎಕರೆ ಜಮೀನು ಅತಿಕ್ರಮಣವಾಗಿರುತ್ತದೆ. 1084.97.50 ಎಕರೆ ಜಮೀನನ್ನು ಇತರೆ ಉದ್ದೇಶಕ್ಕೆ ಬಳಸಲಾಗಿದ್ದು, ಉಳಿಕೆ 1545.65.70 ಎಕರೆ ಜಮೀನಿರುತ್ತದೆ. ಒತ್ತುವರಿಯಾದ ಗೋಮಾಳ ಜಮೀನುಗಳಿಗೆ ನಮೂನೆ 50,3,57,94ಸಿ ಹಾಗೂ 94ಸಿಸಿ ರಡಿಯಲ್ಲಿ ಅರ್ಜಿಗಳು ದಾಖಲಾಗಿರುತ್ತವೆ ಹಾಗೂ ಗೇರು, ಪ್ಲಾಂಟೇಶನ್, ರಸ್ತೆ, ಅರಣ್ಯ ಇಲಾಖೆ, ನಡುತೋಪು, ಇತ್ಯಾದಿಯವರ ಸ್ವಾಧೀನದಲ್ಲಿರುವುದರಿಂದ ತೆರವುಗೊಳಿಸಲು ಕ್ರಮವಹಿಸಲಾಗುತ್ತಿದೆ. |

(ಕಡತ ಸಂಖ್ಯೆ: ಆರ್‌ಡಿ 55 ಎಲ್‌ಜಿಎ 2026)

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು